ಕೊಂಡು, ಕಳ್ಳಮಾಲು ಪಡೆದಿದ್ದಾರೆಂದು ಮೂಡಲಗಿರಿಯಪ್ಪ ಎನ್ನುವರಿಂದ ೪೦ ಸಾವಿರ ರೂಪಾಯಿ ಪಡೆದರು. ಆ ಪ್ರಕರಣದಲ್ಲಿ ಸಾಕ್ಷ್ಯವನ್ನು ಸೃಷ್ಟಿಮಾಡಿದರು ಎಂಬ ಆರೋಪದ ಮೇಲೆ ಈಗಾಗಲೇ ಶಿಸ್ತಿನ ಕ್ರಮ ಹೂಡಿ ಇಲಾಖಾ ವಿಚಾರಣೆಯ ಕೊನೆಯ ಹಂತದಲ್ಲಿ ಅವರನ್ನು ಡಿ. ಐ. ಜಿ. ಕೇಂದ್ರ ವಲಯದವರು ಗುತಕ್ಕೆ ಸೇವೆಯಿಂದ ವಜಾ ಮಾಡಬಾರದೆಂದು ಷೋಕಾಸ್ ನೋಟೀಸ್ ಕೊಟ್ಟಿದ್ದಾರೆ (೧೯-೮-೮೭) ಅದಕ್ಕೆ ಉತ್ತರ ಬಂದ ನಂತರ ಮುಂದಿನ ಕ್ರಮ ಜರುಗಿಸಲಾಗುವುದು. ಈ ತಿಂಗಳ ಒಳಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ. ಲಕ್ಕಪ್ಪ.—ಅದೇನೋ ಕಳ್ಳ ಮಾಲು ಪೋಲೀಸ್ ಸ್ಟೇಷನ್‌ಗೆ ತರಿಸಿಕೊಂಡರು ಎಂದು ಇದರಲ್ಲಿದೆ. ಅವರಿಗೆ ಸಾವಿರ ತೆಂಗಿನಗಿಡ ಇದೆ. ತೆಂಗಿನ ತೋಟ ಇರುವವರು ಅವರು. ಅವರು ಕಳ್ಳ ವ್ಯಾಪಾರ ಮಾಡಿದರೆ ಆಕ್ಷನ್ ತೆಗೆದುಕೊಳ್ಳಬೇಕಾಗಿತ್ತು. ಅದು ಬಿಟ್ಟು ವಿನಾಕಾರಣ ಪೋಲಿಸ್ ಸ್ಟೇಷನ್‌ನಲ್ಲಿ ಕೇಸ್ ರಿಜಿಸ್ಟರಾಗಿದೆ.

ಛೇರ್‌ಮನ್.—ಉತ್ತರ ಸರಿಯಾಗಿ ಕೊಟ್ಟಿದ್ದಾರೆ.

(೦೯) ಕುಂದಾಪುರ ಸರ್ಕಾರಿ ಆಸ್ಪತ್ರೆಗೆ ವೈದ್ಯರನ್ನು ನೇಮಿಸುವುದು

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಕುಂದಾಪುರ ಸರ್ಕಾರಿ ಆಸ್ಪತ್ರೆ, ತಾಲ್ಲೂಕು ಮಟ್ಟದ ಆಸ್ಪತ್ರೆ ಯಾಗಿದ್ದು ಅಸಂಖ್ಯಾತ ಹಳ್ಳಿಗರಿಗೆ, ಸಹಸ್ರಾರು ಕಾರ್ಮಿಕರಿಗೆ ಇತರ ಬಡವರಿಗೆ ಶುಶ್ರೂಷೆ ಒದಗಿಸುವ ಪ್ರಮುಖ ಕೇಂದ್ರವಾಗಿದೆ. ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿರುವ ಈ ಆಸ್ಪತ್ರೆಗೆ ಆ ಹೆದ್ದಾರಿಯಲ್ಲಾದ ಅಪಘಾತಕ್ಕೀಡಾದವರನ್ನು ತಂದು ಸೇರಿಸಬೇಕಾಗುತ್ತದೆ. ಆದರೆ ರಾತ್ರಿ ಹೊತ್ತು ಆಸ್ಪತ್ರೆಯಲ್ಲಿ ಡ್ಯೂಟಿ ಡಾಕ್ಟರರೇ ಇಲ್ಲ. ೮ ಗಿಗಳ ಕಡೆಯವರು ವೈದ್ಯಾಧಿಕಾರಿಗಳ ನಿವಾಸಕ್ಕೆ ತೆರಳಿ ಅವರನ್ನೆಬ್ಬಿಸಿ ಕರೆತರಬೇಕು. ಆಂಬ್ಯುಲೆನ್ಸ್ ವಾಹನ ಇದ್ದರೂ ಅದಕ್ಕೆ ರಿಪೇರಿ ಇಲ್ಲ. ಚಾಲಕನಂತೂ ಇಲ್ಲವೇ ಇಲ್ಲ. ಕಟ್ಟಡದ ಹೆಂಚು ಅಲ್ಲಲ್ಲಿ ಒಡೆದು ನೀರು ಸೋರುತ್ತಿದೆ. ಬಾಗಿಲು-ಕಿಟಕಿಗಳ ದುರಸ್ತಿ ಇಲ್ಲ ಈ ಎಲ್ಲಾ ವಿಚಾರಗಳ ಕುರಿತು ಸಾರ್ವಜನಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಈ ಎಲ್ಲ ವಿಚಾರಗಳನ್ನು ಶೀಘ್ರವಾಗಿ ಗಮನಿಸಬೆ ಕೆಂದೂ, ಸೂಕ್ತ ವ್ಯವಸ್ಥೆ ಮಾಡಬೇಕೆಂದೂ, ಡ್ಯೂಟಿ ಡಾಕ್ಟರ್ ವ್ಯವಸ್ಥೆಯನ್ನು ತಕ್ಷಣ ಮಾಡಬೇಕೆಂದೂ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಆರೋಗ್ಯ ಸಚಿವರು ಮೇಲ್ಮನೆಯಲ್ಲಿದ್ದಾರೆ, ಅವರಿಂದ ಉತ್ತರ ಒದಗಿಸಿಕೊಡುತ್ತೇನೆ.

(೨೦) ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಕೋಬಾಲ್ಟ್ ಪ್ಲಾಂಟ್ ಇಲ್ಲದಿರುವುದು

ಶ್ರೀ ಬ್ಲೇಸಿಯಸ್. ಎಂ. ಡಿಸೋಜ.—ಮಂಗಳೂರಿನ ಜಿಲ್ಲಾ ಆಸ್ಪತ್ರೆ (ವೆನ್‌ಲಾಕ್)ಗೆ ಬಹಳ ಮಂದಿ ಕ್ಯಾನ್ಸರ್ ರೋಗಿಗಳು ಬರುತ್ತಿದ್ದು ಅವರಿಗೆ ಸರಿಯಾದ ಚಿಕಿತ್ಸೆ ನೀಡಲು ಕೋಬಾಲ್ಟ್ ಪ್ಲಾಂಟ್ ಇಲ್ಲದೇ ರೋಗಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಕಳೆದ ಆಯವ್ಯಯ ದಲ್ಲಿ ಕೋಬಾಲ್ಟ್ ಪ್ಲಾಂಟ್ ಒದಗಿಸುವ ಬಗ್ಗೆ ಹಣವನ್ನು ಒದಗಿಸಲಾಗಿದ್ದು ಈ ವರೆಗೂ ಆ ಬಗ್ಗೆ ಸರ್ಕಾರದವರು ಕ್ರಮ ಕೈಗೊಂಡಿಲ್ಲ. ಆದ್ದರಿಂದ ಈಗಲಾದರೂ ಕೋಬಾಲ್ಟ್ ಪ್ಲಾಂಟ್ ಒದಗಿಸಿ ಆಸ್ಪತ್ರೆಗೆ ಬರುತ್ತಿರುವ ಬಡ ಕ್ಯಾನ್ಸರ್ ರೋಗಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಆರೋಗ್ಯ ಮಂತ್ರಿಗಳು ಆ ಸದನದಲ್ಲಿದ್ದಾರೆ, ಉತ್ತರ ಒದಗಿಸಿಕೊಡುತ್ತೇನೆ.

(೨೧) ವರಾಹಿ ಬೃಹತ್ ನೀರಾವರಿ ಯೋಜನೆಯನ್ನು ತ್ವರಿತಗೊಳಿಸುವುದು

ಶ್ರೀ ಜಿ. ಎಸ್. ಆಚಾರ್.—ದಕ್ಷಿಣ ಕನ್ನಡದ ಉತ್ತರ ಭಾಗದ ಸಹಸ್ರಾರು ಎಕರೆ ಭೂಮಿಗೆ ನೀರುಣಿಸಬಲ್ಲ, ಕುಂದಾಪುರ-ಉಡುಪಿ ತಾಲ್ಲೂಕಿನ ರೈತರಿಗೆ ವರದಾನವಾಗಬಲ್ಲ, ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಬೇಕಾದ ನೀರು-ಕಬ್ಬು ಒದಗಿಸುವ ಕಾಮಧೇನುವಾಗಬಲ್ಲ ವಾರಾಹಿ ಬೃಹತ್ ನೀರಾವರಿ ಯೋಜನೆಯನ್ನು ಈ ವರ್ಷದ ಕೈಗೆತ್ತಿಕೊಳ್ಳಬೇಕೆಂದು ಒತ್ತಾಯ ಮಾಡಿದಾಗ ಕೈಗೆತ್ತಿಕೊಳ್ಳ